

ಆ ದಿನವಂತೂ... ಮರೆಯಲೇ ಆಗದು. ರಾತ್ರಿ ಎಲ್ಲ ಕೆಲಸ ಮುಗಿಸಿ ಕೇಶವನ ತಟ್ಟೆ ಲೋಟ ತೆಗೆದಿಟ್ಟು ಕುಡಿಯಲು ಹೂಜಿಯಲ್ಲಿ ನೀರಿಟ್ಟು ಮಲಗಿದ್ದರವರು. ಬಹುಶಃ ಗಂಟೆ ಹನ್ನೊಂದಾಗಿರಬಹುದೇನೋ. ಕೇಶವನ ಕೋಣೆಯಿಂದ ಬಂದ ಲೋಟ ಉರುಳಿದ ಸದ್ದು, ಸಣ್ಣಗೆ ಬಿಕ್ಕಿದ ಸದ್ದು ಕೇಳಲೇ ಇಲ್ಲದಂತೆ ಮಗ್ಗಲು ಬದಲಿಸಿದ್ದರು. ಬೆಳಿಗ್ಗೆ ಎಂದಿನಂತೆ ಪತಿಯ ಕೋಣೆಗೆ ಹೋದವರಿಗೆ ಶಾಕ್ ಆಗಿತ್ತು. ದೇಹ ತಣ್ಣಗೆ ಕೊರೆದ ರೀತಿ ನೋಡಿದರೆ ಸಾವು ಹನ್ನೊಂದಕ್ಕೇ ಬಂದಿತ್ತೇನೋ. ದಿವಸ ಕಾರ್ಯಗಳೆಲ್ಲ ಮುಗಿದ ಮೇಲೆ ಒಮ್ಮೆಲೆ ಎದ್ದಿತ್ತು ಆ ಪ್ರಶ್ನೆ 'ಆ ದಿನ ಲೋಟ ಉರುಳಿದ ಸಪ್ಪಳ ಕೇಳಿದ ಮೇಲೆ, ಅಂದರೆ ನಿದ್ದೆಗೆ ಮತ್ತೊಮ್ಮೆ ಜಾರುವ ಮುನ್ನ ಅವರು ಬಿಕ್ಕಿದ ರೀತಿ ವಿಚಿತ್ರವಾಗಿತ್ತು. ಕೊನೆಯ ಗಳಿಗೆ ಬಂದೇ ಬಿಟ್ಟಿರಬಹುದೇ... ಎಂಬ ವಿಚಾರ ನನ್ನ ತಲೇಲಿ ಅರೆಗಳಿಗೆ ಹಾಯ್ದು ಹೋತಾ? ಇಲ್ಲವಾ?' ಅಚಾನಕ್ಕಾಗಿ ಎದ್ದ ಪ್ರಶ್ನೆ ಸತತ ಆರುವರ್ಷಗಳಿಂದ ಅವರನ್ನು ಕಾಡುತ್ತಿದೆ.

ಇಷ್ಟು ವರ್ಷಗಳೂ ಕಾಡಿದ ಪ್ರಶ್ನೆಗೆ ಇಂದು ಉತ್ತರ ದೊರೆಕಿತೇನೋ ಎಂಬಂತೆ ಬಿಕ್ಕಿ ಬಿಕ್ಕಿ ಅತ್ತರವರು. ಅಂದರೆ... ಅಂದರೆ... ಸಾವು ಅವರ ಹೊಸ್ತಿಲಲ್ಲೇ ನಿಂತಿತ್ತು ಅಂತ ಅರಿವಾಗಿಯೂ ನಾ ಒಳಕ್ಕೆ ಹೋಗಲಿಲ್ಲವೆ? ಕಡೆಯ ಕ್ಷಣದಲ್ಲಿ ಅವರ ಬಾಯಿಗೊಂದು ಹನಿ ನೀರು ಬಿಡಲಾರದಷ್ಟು ಕಠೋರವಾದೆನೆ?

ಎದೆಯಲ್ಲಿ ಮಡುಗಟ್ಟಿದ್ದ ನಂಜೊಂದು ನೀರಾಗಿ ಹರಿದು ಹೋದಂತೆ ಭೋರೆಂದು ಅತ್ತರು. ನಿತ್ಯ ಅನ್ನಪೂರ್ಣಾ, ಗಂಗೆ, ಲಕ್ಷ್ಮಿಯ ಮೂರ್ತಿಗಳನ್ನು ಗೌರಿ ಪೆಟ್ಟಿಗೆಯಿಂದ ತೆಗೆದು ಅಭಿಷೇಕ ಮಾಡಿ ಪೂಜೆ ಮಾಡುತ್ತಿದ್ದ ಮುತ್ತೈದೆತನದ ದಿನಗಳು ನೆನಪಾದವು. 'ಬರೀ ದೇವರನ್ನು ತೊಳೆದಿಟ್ಟೆ. ಆದರೆ 'ಕಿವಿ ಮಂದ, ಕಿವಿ ಮಂದ ಅಂತ ನನ್ನನ್ನು ಬದುಕಿಡೀ ಹೀನಾಯವಾಗಿ ಕಂಡರಲ್ಲ; ಅದಕ್ಕೇ ಈಗ ಕಡೆಗಾಲದಲ್ಲಿ ಅನುಭವಿಸ್ತಿದ್ದಾರೆ' ಎನ್ನೋ ಕಹಿನಂಜು ತುಂಬಿದೆದೆ? ಅದು ವರ್ಷದಿಂದ ವರ್ಷಕ್ಕೆ ಮಡುಗಟ್ಟುತ್ತಲೇ